ಕೃಷ್ಣಾ ಮೇಲ್ದಂಡೆ ಯೋಜನೆಯ ಗುತ್ತಿಗೆದಾರರು

ಶ್ರೀ ಬಿ ಬಸವಲಿಂಗಪ್ಪ (ಯಲಹಂಕ).—ಮಾನ್ಯ ಲೋಕೋಪಯೋಗಿ ಹಾಗೂ ನೀರಾವರಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಕೃಷ್ಣಾ ಮೇಲ್ದಂಡೆ ಯೋಜನೆಯಲ್ಲಿ ಗುತ್ತಿಗೆ ದರಗಳ ವಿಷಯದಲ್ಲಿ ಸರ್ಕಾರ ಕೊಟ್ಟ ನಿರ್ಣಯಗಳಿಗೆ ಸಮ್ಮತಿಸದೆ, ಪಂಚಾಯಿತಿಗೆ ಹೋದ ಗುತ್ತಿದಾರರ ಸಂಖ್ಯೆ ಎಷ್ಟು,

ಆ) ಪಂಚಾಯತಿ ಮೂಲಕ ಇಂತಹ ಗುತ್ತಿಗೆದಾರರಿಗೆ ಸಂದಾಯವಾದ ಹಣವೆಷ್ಟು,

ಇ) ಯಾರಾವರೂ ಗುತ್ತಿಗೆದಾರರಿಗೆ ಗುತ್ತಿಗೆ ದರಗಳ ಪ್ರಕಾರ ಕೆಲಸದ ಮುಕ್ತಾಯವಾದ ನಂತರ ಸರಕಾಲದಲ್ಲಿ ಹಣ ಸಂದಾಯ ಮಾಡಲಾಗಿದೆಯೆ,

ಈ) ಗುತ್ತಿಗೆದಾರರಿಗೆ ಗುತ್ತಿಗೆ ದರಗಳ ಪ್ರಕಾರ ಸಕಾಲದಲ್ಲಿ ಹಣ ಸಂದಾಯ ಮಾಡಿದ್ದರೆ ಆಗ ಬಹುದಾದ ಹಣದ ಮೊತ್ತವೆಷ್ಟು ?

ಶ್ರೀ ಹೆಚ್.ಡಿ. ದೇವೇಗೌಡ (ಲೋಕೋಪಯೋಗಿ ಮತ್ತು ನೀರಾವರಿ ಮಂತ್ರಿಗಳು).—

ಅ) ಪಂಚಾಯತಿಗೆ ಹೋದ ಗುತ್ತಿಗೆದಾರರ ಸಂಖ್ಯೆ ಈ ರೀತಿ ಇದೆ.

೧) ಅಣೆಕಟ್ಟು ವಲಯ, ಆಲಮಟ್ಟಿ	೨೬
೨) ಕಾಲುವೆ ವಲಯ ಸಂಖ್ಯೆ–೧, ಭೀಮರಾಯನಗುಡಿ	೧೫
ಒಟ್ಟು	೪೧

ಆ) ಪಂಚಾಯಿತಿ ತೀರ್ಪುಗಳನ್ನು ಸ್ವೀಕರಿಸಿದ ಪ್ರಕರಣಗಳಲ್ಲಿ ತೀರ್ಪಿನ ಮೊತ್ತದ ಒಳಗಡೆ ಸಂದಾಯವಾದ ಹಣ ಈ ರೀತಿ ಇದೆ

೧) ಅಣೆಕಟ್ಟು ವಲಯ, ಆಲಮಟ್ಟಿ	೪೪೦.೦೦ ಲಕ್ಷ ರೂ.ಗಳು
೨) ಕಾಲುವೆ ವಲಯ ಸಂಖ್ಯೆ–೧, ಭೀಮರಾಯನಗುಡಿ	೩೧೬.೭೦ ಲಕ್ಷ ರೂ.ಗಳು
ಮೊತ್ತ	೭೫೬.೭೯ ಲಕ್ಷ ರೂ.ಗಳು

ಇ) ಗುತ್ತಿಗೆ ಐಟಂಗಳಿಗೆ ಗುತ್ತಿಗೆಯಲ್ಲಿ ನಮೂದಿಸಿದ ಮಿತಿಯವರೆಗೆ ಮಾಡಲಾದ ಪ್ರಮಾಣಗಳಿಗೆ ಗುತ್ತಿಗೆ ದರಗಳಂತೆ ಸಕಾಲದಲ್ಲಿ ಸಂದಾಯ ಮಾಡಲಾಗಿದೆ. ಗುತ್ತಿಗೆ ಐಟಂಗಳಿಗೆ ಗುತ್ತಿಗೆ ಮಿತಿಯನ್ನು ಮೀರಿ ಮಾಡಲಾದ ಪ್ರಮಾಣಗಳಿಗೆ ಮತ್ತು ಗುತ್ತಿಗೆಯಲ್ಲಿಲ್ಲದ ಹೆಚ್ಚುವರಿ ಐಟಂಗಳಿಗೆ ಗುತ್ತಿಗೆಯ ನಿಯಮಾವಳಿಯಂತೆ ಪರಸ್ಪರ ಒಪ್ಪಿತ ದರಗಳನ್ನು ಕೊಡಬೇಕಾಗುತ್ತದೆ. ಆದ್ದರಿಂದ ಇಂತಹ ಪ್ರಕರಣಗಳಿಗೆ ಗುತ್ತಿಗೆ ದರಗಳು ಅನ್ವಯಿಸುವುದಿಲ್ಲ.

ಈ) ಉದ್ಭವಿಸಂವುದಿಲ್ಲ.

ಪ್ಯೇಜರ್ ಟೌನ್ ಮತ್ತು ಅಲಸೂರಿನ ಪೋಲೀಸ್ ಕ್ವಾರ್ಟರ್ಸ್‌ಗಳ ಬಗ್ಗೆ

ಶ್ರೀ ಕೆ. ಜೆ. ಜಾರ್ಜ್ (ಭಾರತೀನಗರ).—ಮಾನ್ಯ ಲೋಕೋಪಯೋಗಿ ಹಾಗೂ ನೀರಾವರಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಫ್ಯೇಜರ್‌ಟೌನ್ ಮತ್ತು ಅಲಸೂರುಗಳಲ್ಲಿರುವ ಪೋಲೀಸರ ಅಧಿಕೃತ ವಾಸದ ಮನೆಗಳ ನೀರಿನ ಮೇಲೊಟ್ಟಿ ಮತ್ತು ನೆಲತೊಟ್ಟಿ ಇವುಗಳಿಗೆ ಸಂಪರ್ಕಿಸುವ ನೀರೆತ್ತುವ ಯಂತ್ರ ಸ್ಥಾಪಿಸಲು ಮಾಡಲಾಗಿರುವ ಪೆಚ್ಚುವೆಷ್ಟು ?

ಬಿ) ಸದರಿ ಯಂತ್ರ ಕೆಲಸ ಮಾಡುತ್ತಿಲ್ಲದಿರುವುದು ಹಾಗೂ ಇದರಿಂದ ಈ ಮನೆಗಳಲ್ಲಿ ವಾಸಿಸುತ್ತಿರುವವರಿಗೆ ನೀರು ಸರಬರಾಜಿನ ಕೊಂದರೆ ಆಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೆ ?